# ಕುಂದು ಕೊರತೆ

## ತ್ಯಾಜ್ಯ ವಿಲೇವಾರಿ ಮಾಡಿಸಿ



ಸರಸ್ವತಿಪುರಂನ 14ನೇ ವೃತ್ತದಲ್ಲಿರುವ ಮಹಾಬೋಧಿ ಸಂಸ್ಥೆ ಮುಂಭಾಗ ತ್ಯಾಜ್ಯ ಸಂಗ್ರಹಣಾ ತೊಟ್ಟಿ ಇಡದಿರುವುದರಿಂದ ಸ್ಥಳೀಯರು ಸುರಿದಿರುವ ತ್ಯಾಜ್ಯ ರಸ್ತೆಗೆ ಹರಡಿದೆ. ಇದರಿಂದ ಸಾರ್ವಜನಿಕರ ಸಂಚಾರಕ್ಕೆ ತೊಂದರೆಯಾಗಿದೆ.

ಪೌರಕಾರ್ಮಿಕರು ಬೆಳಿಗ್ಗೆ ವೇಳೆ ಸ್ವಚ್ಛಗೊಳಿಸಿದರೂ ಸ್ವಲ್ಪ ಸಮಯದಲ್ಲೇ ಕಸದ ರಾಶಿಯೇ ಇರುತ್ತದೆ. ಸಂಬಂಧಪಟ್ಟ ಪಾಲಿಕೆ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಂಡು ತ್ಯಾಜ್ಯ ವಿಲೇವಾರಿ ಸಂಗ್ರಹಕ್ಕೆ ಡಬ್ಬ ಅಥವಾ ತೊಟ್ಟಿ ವ್ಯವಸ್ಥೆ ಮಾಡಬೇಕು.

**ಶ್ರೀನಿವಾಸ ಪ್ರಸಾದ್,** ಸರಸ್ವತಿಪುರಂ



## ಕೆರೆ ಮುಂಭಾಗ ಕಸ ಸುರಿಯದಿರಿ

ಮೈಸೂರಿನ ಕುಕ್ಕರಹಳ್ಳಿ ಕೆರೆ ಮುಂಭಾಗದ ರಸ್ತೆ ಬದಿಯಲ್ಲಿ ಸ್ಥಳೀಯರು ಸಗಣಿ ಹಾಗೂ ಪ್ಲಾಸ್ಟಿಕ್ ತ್ಯಾಜ್ಯವನ್ನು ಸುರಿದಿದ್ದಾರೆ.

ಇದರಿಂದ ಸಾರ್ವಜನಿಕರು ಮೂಗು ಮುಚ್ಚಿಕೊಂಡು ಓಡಾಡುವಂತಾಗಿದೆ. ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಕ್ರಮ ಕೈಗೊಳ್ಳಬೇಕು. ಹಾಗೂ ರಸ್ತೆಯಲ್ಲಿ ತ್ಯಾಜ್ಯ ಸಂಗ್ರಹಣಾ ತೊಟ್ಟಿಯನ್ನು ಅಳವಡಿಸಬೇಕು.

**ಹರೀಶ್‌ಎಸ್.,** ವಿದ್ಯಾರ್ಥಿ

## ರಸ್ತೆ ದುರಸ್ತಿಗೆ ಕ್ರಮ ಕೈಗೊಳ್ಳಿ

ಜೆ.ಪಿ.ನಗರದ ಅಕ್ಕಮಹಾದೇವಿ ರಸ್ತೆ ಹೊರವರ್ತುಲ ರಸ್ತೆ ಡಾಂಬರು ಕಿತ್ತುಹೋಗಿದ್ದು, ವಾಹನ ಸಂಚಾರಕ್ಕೆ ಸಮಸ್ಯೆ ಉಂಟಾಗಿದೆ.

ಇದು ಚಾಮುಂಡಿಬೆಟ್ಟ ಹಾಗೂ ಬಂಡಿಪಾಳ್ಯ ಮಾರುಕಟ್ಟೆಗೆ ಸಂಪರ್ಕ ಕಲ್ಪಿಸುವ ಪ್ರಮುಖ ರಸ್ತೆಯೂ ಆಗಿರುವುದರಿಂದ ಲಾರಿ, ಕಾರಿನಂಥ ವಾಹನಗಳು ವೇಗವಾಗಿ ಚಲಿಸುತ್ತವೆ. ಈಗಾಗಲೇ ದ್ವಿಚಕ್ರ ವಾಹನ ಸವಾರರಿಗೆ ಅಪಘಾತ ಉಂಟಾಗಿದೆ. ಪಾದಚಾರಿಗಳಂತೂ ರಸ್ತೆ ದಾಟಲು ಹರಸಾಹಸ ಪಡುವಂತಾಗಿದೆ. ಪ್ರಾಣಹಾನಿ ಸಂಭವಿಸುವುದಕ್ಕೂ ಮುನ್ನ ಸಂಬಂಧಪಟ್ಟ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳಬೇಕು.

**ಅಭಿಷೇಕ್ ವೈ.ಎಸ್,** ಜೆ.ಪಿ ನಗರ



## ಬೀದಿನಾಯಿ ಹಾವಳಿ ತಪ್ಪಿಸಿ

ವಾಯುವಿಹಾರಿಗಳ ಪ್ರಮುಖ ತಾಣಗಳಲ್ಲಿ ಒಂದಾಗಿರುವ ಮಾನಸಗಂಗೋತ್ರಿ ಆವರಣದಲ್ಲಿ ಶ್ವಾನಗಳ ಹಾವಳಿ ಹೆಚ್ಚಾಗಿದೆ.

ಇವು ವಾಯುವಿಹಾರಿಗಳಿಗೆ ಮಾತ್ರವಲ್ಲದೇ ವಿದ್ಯಾರ್ಥಿಗಳಿಗೂ ತೊಂದರೆ ಉಂಟುಮಾಡುತ್ತಿದ್ದು, ಭಯದ ವಾತಾವರಣ ಸೃಷ್ಟಿಸಿವೆ.

ಸಂಬಂಧಪಟ್ಟ ಅಧಿಕಾರಿಗಳು ಗಮನಹರಿಸಿ ಸೂಕ್ತ ಕ್ರಮ ಕೈಗೊಳ್ಳಬೇಕು.

**ಮಳಲಿ ನಾಭಿರಾಜ್,**
ಚಾಮುಂಡಿಪುರಂ





ನಗರದ ಶ್ರೀರಾಂಪುರ 2ನೇ ಹಂತದ 14ನೇ ಅಡ್ಡರಸ್ತೆಯಲ್ಲಿ ಈಚೆಗೆ ಬೀದಿ ನಾಯಿಗಳ ಕಾಟ ಹೆಚ್ಚಾಗಿದ್ದು, ಸಾರ್ವಜನಿಕರಿಗೆ ತೊಂದರೆಯುಂಟುಮಾಡುತ್ತಿವೆ. ಸಂಬಂಧಪಟ್ಟ ಅಧಿಕಾರಿಗಳು ಕ್ರಮ ಕೈಗೊಂಡು ಬೀದಿ ನಾಯಿ ಹಾವಳಿ ತಪ್ಪಿಸಬೇಕು.

**ಶಿವಶಂಕರ್,** ಶ್ರೀರಾಂಪುರ

## ಒಣಗಿದ ಮರ ತೆರವುಗೊಳಿಸಿ

ಕೃಷ್ಣಮೂರ್ತಿಪುರಂನ 6ನೇ ಕ್ರಾಸ್‌ನಲ್ಲಿ ಒಣಗಿದ ಮರವಿದೆ.

ಈ ಒಣಗಿದ ಮರ ಯಾವುದೇ ಕ್ಷಣದಲ್ಲಿ ಬೀಳಬಹುದು. ಮರದ ಅಕ್ಕಪಕ್ಕದಲ್ಲಿ ವಿದ್ಯುತ್ ಕಂಬಗಳು ಇರುವುದರಿಂದ ಸಾರ್ವಜನಿಕರಿಗೂ ಅಪಾಯ ತರಬಹುದು. ಮಳೆಗಾಳಿಗೂ ಬೀಳುವ ಸಂಭವವಿದ್ದು, ಸಂಬಂಧಪಟ್ಟ ಅಧಿಕಾರಿಗಳು ಕ್ರಮ ಕೈಗೊಂಡು ಮರ ತೆರವುಗೊಳಿಸಬೇಕು.

**ಎಂ.ಎಸ್.ರಾಜಗೋಪಾಲ್,**
ಕೃಷ್ಣಮೂರ್ತಿಪುರಂ



# ನೋಡ ಬನ್ನಿ ಮೈಸೂರು ಕರಗ

ಮೈಸೂರು ಎಂದೊಡನೆ ಎಲ್ಲರಿಗೂ ನೆನಪಾಗುವುದು ಬೆಟ್ಟದ ತಾಯಿ ಚಾಮುಂಡೇಶ್ವರಿ. ಇಲ್ಲಿ ಈ ಅಧಿದೇವತೆಯ ಉತ್ಸವಗಳನ್ನು ಆಯಾ ಕಾಲಕ್ಕೆ ಆಚರಿಸಿಕೊಂಡು ಬರಲಾಗುತ್ತಿದೆ. ಇದರಲ್ಲಿ ದಸರಾ ಮಹೋತ್ಸವ ಹಾಗೂ ಕರಗ ಮಹೋತ್ಸವ ಪ್ರಮುಖವಾದವು.

ಇಟ್ಟಿಗೆಗೂಡಿನ ರೇಣುಕಾದೇವಿ ಕರಗ ದೇವಸ್ಥಾನ ಟ್ರಸ್ಟ್ ಆಯೋಜಿಸಿಕೊಂಡು ಬರುತ್ತಿರುವ 'ಮೈಸೂರು ಕರಗ ಮಹೋತ್ಸವ' 95ನೇ ವರ್ಷಕ್ಕೆ ಕಾಲಿಟ್ಟಿದೆ.



ಬುಧವಾರದಿಂದ ಶನಿವಾರದವರೆಗೆ (ಮೇ 8 ರಿಂದ 11) ಕರಗ ಉತ್ಸವವು ಇಟ್ಟಿಗೆಗೂಡಿನ ಎಲ್ಲಾ ಬೀದಿಗಳಲ್ಲೂ ಸಂಚರಿಸಿ, ಎಲ್ಲರ ಮನೆಯಲ್ಲೂ ಕರಗ ಇಳಿಸಲಾಗುತ್ತದೆ. ಈ ವೇಳೆ ಹರಕೆ ಇರುವ ಕನ್ಯೆಯರು ಮನೆಯಲ್ಲಿ ಕರಗ ಕೂರಿಸಿ ವಿವಾಹ ಪ್ರಾಪ್ತಿಗಾಗಿ ಮಾಂಗಲ್ಯ ಪೂಜೆ ನೆರವೇರಿಸುತ್ತಾರೆ. ಇನ್ನು ಕೆಲ ಭಕ್ತರು ಮನೆಯಲ್ಲೇ ಕೂರಿಸಿದ ದೇವಿಗೆ ಹಾಲು, ಮಜ್ಜಿಗೆ, ಪಾನಕ, ಕೋಸಂಬರಿ ವಿವಿಧ ಬಗೆಯ ನೈವೇದ್ಯಗಳನ್ನು ಮಾಡಿ ಪೂಜಿಸುತ್ತಾರೆ.

ಬುಧವಾರ (ಮೇ 8) ಬೆಳಿಗ್ಗೆ 6ಕ್ಕೆ ಚಾಮುಂಡೇಶ್ವರಿ ಮತ್ತು ಮಾರಿಯಮ್ಮ ದೇವರಿಗೆ ಅಭಿಷೇಕ ನೆರವೇರಿಸಿ ಕಂಕಣ ಕಟ್ಟಲಾಗುವುದು. ಮಧ್ಯಾಹ್ನ 1ಕ್ಕೆ ಕರಗ ಮೆರವಣಿಗೆ ಸಾಗುತ್ತದೆ. ಗುರುವಾರ ಮತ್ತು ಶುಕ್ರವಾರ ವಿವಿಧ ಬಡಾವಣೆಗಳಲ್ಲಿ ಕರಗ ಮೆರವಣಿಗೆ ಮತ್ತು ಪೂಜೆ ಇರುತ್ತದೆ.

ಶನಿವಾರ (ಮೇ 11) ರಾತ್ರಿ 8ಕ್ಕೆ ಪ್ರಮುಖ ಆಕರ್ಷಣೆಯಾದ ಕರಗ ಉತ್ಸವ ನಡೆಯಲಿದ್ದು, ರೇಣುಕಾದೇವಿ ಕರಗ ದೇವಸ್ಥಾನ ಟ್ರಸ್ಟ್‌ನ ಅಧ್ಯಕ್ಷ ಸಂದೇಶ್ ನಾಗರಾಜ್ ಅವರು ಉದ್ಘಾಟಿಸಲಿದ್ದಾರೆ. ನಂತರ ಉತ್ಸವವು ದೇವಸ್ಥಾನದಿಂದ ಹೊರಟು ಭಕ್ತರ ಪೂಜೆ ಸ್ವೀಕರಿಸುತ್ತಾ ಹೊರಡುತ್ತದೆ. ಅಲ್ಲಿಂದ ಪ್ಯಾಲೆಸ್ ಆಫೀಸ್ ರಸ್ತೆ, ನೂರಡಿ ರಸ್ತೆ, ನಾರಾಯಣ ಶಾಸ್ತ್ರಿ ರಸ್ತೆ, ನಲ್ಲಪ್ಪತಾಣಾ ರಸ್ತೆ ಶಿವರಾಂಪೇಟೆ, ಸಯ್ಯಾಜಿರಾವ್ ರಸ್ತೆ, ಮಿಷನ್ ಆಸ್ಪತ್ರೆ ರಸ್ತೆ, ಕಬೀರ್ ರಸ್ತೆ, ಕಾಳಮ್ಮ ಗುಡಿ ರಸ್ತೆ, ಇರ್ವಿನ್ ರಸ್ತೆ, ಕುರುಬಗೇರಿ, ಕುಂಬಾರಗೇರಿ, ಅಶೋಕ ರಸ್ತೆ, ನಜರಬಾದ್ ರಸ್ತೆ ಮಾರ್ಗವಾಗಿ ಮೆರವಣಿಗೆ ಹೊರಟು ಬೆಳಿಗ್ಗೆ 8 ಗಂಟೆಗೆ ಮೃಗಾಲಯ ರಸ್ತೆಯ ಮಾರ್ಗವಾಗಿ ದೇವಸ್ಥಾನಕ್ಕೆ ಮೆರವಣಿಗೆ ಸಾಗಲಿದೆ.

ಭಾನುವಾರ (ಮೇ 12) ಕರಗವು ಮರುದಿನ ಬೆಳಿಗ್ಗೆ 9ಗಂಟೆಗೆ ದೇವಸ್ಥಾನ ತಲುಪುತ್ತದೆ. ಈ ಉತ್ಸವದಲ್ಲಿ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕೆಂದು ದೇವಸ್ಥಾನ ಮಂಡಳಿಯು ತಿಳಿಸಿರುತ್ತದೆ.

**ಕರಗ ಅಲಂಕಾರ:** ಕರಗ ಜೋಡಿಸಲು ಹಲವು ಬಗೆಯ ಸಂಪ್ರದಾಯಗಳಿವೆ. ಹದವಾದ ಮಣ್ಣಿನ ಮಡಿಕೆಗೆ ಹಸಿ ದಾರ ಸುತ್ತಿ ಅರಿಶಿನ-ಕುಂಕುಮವಿಟ್ಟು ಅದರಲಿ ಮಿತಿಯಾದ ನೀರಿನೊಂದಿಗೆ ಅರಿಶಿನ ಕೊಂಬು, ನಿಂಬೇಹಣ್ಣು, ಕರ್ಜೂರ, ಪಂಚಲೋಹ, ಕಾದೋಲೆ ಕರಿಮಣಿಗೆ ಅಭಿಷೇಕ ನೆರವೇರಿಸಿ ಮಡಿಕೆಯಲ್ಲಿ ಕಳಸವಿಟ್ಟು ಹಸಿ ಕರಗವನ್ನು ಆರಾಧಿಸಿ ಪೂಜಿಸಿ ನಂತರ ಕರಗವನ್ನು ನಿರ್ದಿಷ್ಟ ಎತ್ತರಕ್ಕೆ ಬೇವಿನ ಸೊಪ್ಪನ್ನು ಸುತ್ತಿ, ಮಲ್ಲಿಗೆ ಹೂವಿನಿಂದ ಸಿಂಗರಿಸಿ, ಕರಗದ ತುದಿಗೆ ನಿಂಬೇಹಣ್ಣು, ರಜತ ಛತ್ರಿ ಇಟ್ಟು, ದೇವಿಯ ವಿಗ್ರಹವನ್ನು ಪ್ರತಿಷ್ಠಾಪಿಸಿ ಅಲಂಕರಿಸುತ್ತಾರೆ.

# ಬಸವ ಎಂಬ ಬೆಳಗು

ಒಂದನೇ ಪುಟದಿಂದ



**ಮೈಸೂರಿನಲ್ಲಿ ಬಸವನ ಗುರುತುಗಳು:** ಮೈಸೂರು ಭಾಗದಲ್ಲಿ ಬಸವಣ್ಣ ಬಂದಿದ್ದರೋ ಇಲ್ಲವೋ ಗೊತ್ತಿಲ್ಲ. ಆದರೆ, ಅವರ ಅನುಯಾಯಿಗಳು ಈ ಭಾಗಕ್ಕೆ ಬಂದಿದ್ದಂತೂ ದಿಟ. ಇಲ್ಲಿನ ಮಲೆಮಹದೇಶ್ವರ, ಮಂಟೇಸ್ವಾಮಿ ಮೊದಲಾದ ಜನಪದ ದೈವಗಳು ಬಸವಣ್ಣ ಅವರ ತತ್ವಗಳನ್ನೇ ಜನಪದೀಯ ನೆಲೆಗಟ್ಟಿನಲ್ಲಿ ಪ್ರಚುರಪಡಿಸಿದವು. ಸುತ್ತೂರು ಮಠ, ದೇವನೂರು ಮಠ, ಹೊಸಮಠ, ಕುದೇರು ಮಠ, ವಾಟಾಳು ಮಠ, ಮಲ್ಲನಮೂಲೆ ಮಠ... ಹೀಗೆ ಹತ್ತು ಹಲವು ಮಠಗಳು ಬಸವಣ್ಣನವರ ತತ್ವಾದರ್ಶಗಳನ್ನು ವಿರಕ್ತ ಪರಂಪರೆಯ ಮೂಲಕ ಉಳಿಸಿ ಬೆಳೆಸಿದವು.

ಮೈಸೂರಿನಲ್ಲಿ ಬಸವೇಶ್ವರ ಪ್ರತಿಮೆ ಜೆಎಸ್‌ಎಸ್ ಮಹಾವಿದ್ಯಾಪೀಠದ ಬಳಿ ಇದೆ. ಕಣ್ಮನ ಸೂರೆಗೊಳ್ಳುವಂತಹ ಆಕರ್ಷಕ ಪ್ರತಿಮೆ ಇದಾಗಿದೆ. ಬಹುದೊಡ್ಡ ಮಂಟಪದಲ್ಲಿ ಮೆಟ್ಟಿಲುಗಳನ್ನು ಹೊಂದಿರುವ ಈ ಮಂಟಪ ಅತ್ಯಂತ ಆಕರ್ಷಣೀಯ. ಇದರ ಸುತ್ತ ಇರುವ ಉದ್ಯಾನ ಬಿರುಬೇಸಿಗೆಯ ಸಮಯದಲ್ಲಿ ಬಸವಣ್ಣನವರ ವಚನಗಳಂತೆ ಸದಾ ಹಸಿರಾಗಿಯೇ ಕಂಗೊಳಿಸುತ್ತಿದೆ.

ಬಸವೇಶ್ವರ ರಸ್ತೆ, ಬಸವೇಶ್ವರ ವೃತ್ತ ಎಂದು ಹಾಗೂ ಬಸವೇಶ್ವರ ನಗರ ಎಂಬ ಬಡಾವಣೆಗಳು ನಗರದಲ್ಲಿ ಇವೆ. ಇವರ ತತ್ವಗಳನ್ನು ಸಾರುವ ಸಾಕಷ್ಟು ಮಠಮಾನ್ಯಗಳು ಇಲ್ಲಿವೆ.

## ಮುನ್ನೋಟ

### ಮೇ 7, ಸೋಮವಾರ

**ಪ್ರತಿಭೆ ವೇದಿಕೆ ಉದ್ಘಾಟನೆ**

ನಗರದಲ್ಲಿ ಸಾಮಾಜಿಕ ಹಾಗೂ ಮಕ್ಕಳ ಸಾಂಸ್ಕೃತಿಕ ಕಲಾ ಚಟುವಟಿಕೆಗಳನ್ನು ಉತ್ತೇಜಿಸುವುದಕ್ಕಾಗಿ ಮೇ 7ರಂದು 'ಪ್ರತಿಭೆ' ವೇದಿಕೆ ಆರಂಭಗೊಳ್ಳುತ್ತಿದೆ.

ಅಂದು ಸಂಜೆ 6ಕ್ಕೆ ಶ್ರೀರಾಂಪುರ 2ನೇ ಹಂತದ ವೀರಶೈವ ಸಾರ್ವಜನಿಕ ಸೇವಾಸಂಸ್ಥೆ ಕಟ್ಟಡದ ಸಭಾಂಗಣದಲ್ಲಿ ಕಾರ್ಯಕ್ರಮ ನಡೆಯಲಿದ್ದು, ಸಾಹಿತಿ ಡಾ.ಪ್ರದೀಪಕುಮಾರ ಹೆಬ್ರಿ ಉದ್ಘಾಟಿಸುವರು. ಅತಿಥಿಗಳಾಗಿ ಭಾಸಂಗೆ ಬಳಗದ ಅಧ್ಯಕ್ಷ ಸಿ.ಕೆ. ಸಂಜಯ್ ಕುಮಾರ್ ಹಾಗೂ ಅರಸು ಮಂಡಳಿಯ ಗೌರವ ಕಾರ್ಯದರ್ಶಿ ಕಿರಣ್ ಜಿ.ಎಸ್.ಅರಸ್ ಭಾಗವಹಿಸುವರು.

ಈ ವೇಳೆ ಕವಯತ್ರಿ ಎಸ್.ಶಿವರಂಜಿನಿ ಕೃತಿ ಬಿಡುಗಡೆ ಮಾಡಲಿದ್ದು, ಪ್ರತಿಭೆ ವೇದಿಕೆ ಅಧ್ಯಕ್ಷ ಎಸ್.ರಾಜರತ್ನಂ ಅಧ್ಯಕ್ಷತೆ ವಹಿಸುವರು.

**ಸಾಂಸ್ಕೃತಿ ಸೌರಭ**

ನಗರದ ಸಹಬಾಳ್ವೆ ಚಾರಿಟಬಲ್ ಟ್ರಸ್ಟ್ ವತಿಯಿಂದ ಮೇ 7ರಂದು ಸಂಜೆ 5.30ಕ್ಕೆ ಸಾಂಸ್ಕೃತಿಕ ಸೌರಭ ಹಾಗೂ ಮೈಸೂರು ಆನಂದ್ ಅವರಿಂದ ಹಾಸ್ಯ ಸಂಜೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಸಂಜೆ 6.30ಕ್ಕೆ ಜೆಎಲ್‌ಬಿ ರಸ್ತೆಯಲ್ಲಿರುವ ನಾದಬ್ರಹ್ಮ ಸಂಗೀತ ಸಭಾದಲ್ಲಿ ಕಾರ್ಯಕ್ರಮ ನಡೆಯಲಿದ್ದು, ಬಿ.ವಿ.ಇಳೈ ಆಳ್ವಾರ್ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ. ಅತಿಥಿಯಾಗಿ ರಂಗಕರ್ಮಿ ಮೈಂ ರಮೇಶ್ ಭಾಗವಹಿಸಲಿದ್ದು, ಬೆಂಗಳೂರಿನ ಸಹಬಾಳ್ವೆ ಟ್ರಸ್ಟ್ ಅಧ್ಯಕ್ಷ ಡಾ.ರಾಘವೇಂದ್ರ ಪ್ರಸಾದ್ ಅಧ್ಯಕ್ಷತೆ ವಹಿಸಲಿದ್ದಾರೆ.

# ಅನ್ನಪ್ರಾಶನವೋ ಬ್ರಹ್ಮಪ್ರಾಶನವೋ?

**ತಾರೋಡಿಸುರೇಶ**

ನಿಷ್ಕ್ರಮಣ ಸಂಸ್ಕಾರದ ನಂತರ ಅನ್ನಪ್ರಾಶನ ಸಂಸ್ಕಾರವನ್ನು ಮಾಡಬೇಕು. ವಾಸ್ತವಿಕವಾಗಿ ಈ ಸಂಸ್ಕಾರಕ್ಕೆ 'ನವಾನ್ನಪ್ರಾಶನ' ಎಂದು ಹೆಸರು. ಮೊಟ್ಟಮೊದಲಿಗೆ ಸಂಸ್ಕಾರ ರೂಪವಾಗಿ ಘನಾಹಾರವನ್ನು ಮಗುವಿಗೆ ತಿನ್ನಿಸುವ ಪ್ರಕ್ರಿಯೆ ಇದು. ಹಸಿವಾದಾಗ ಮಗುವು ತಾನೇ ತಿನ್ನುವಾಗ ಇಂತಹ ಕ್ರಿಯೆಯ ಅಗತ್ಯವೇನು? ಎಂಬ ಪ್ರಶ್ನೆ ಬರಬಹುದು. ಅದು ಸಂಸ್ಕಾರವಾಗಬೇಕಾದರೆ ಈ ಕರ್ಮ ಅಗತ್ಯ ಎಂದು ಅದಕ್ಕೆ ಸಂಕ್ಷಿಪ್ತ ಉತ್ತರ.

ಮಗುವಿಗೆ ಮೊದಲ ದರ್ಶನವಾಗಿ ದೀಪ ಬೆಳಗಿಸಿದೆವು. ಹಾಗೆಯೇ ದೇವತಾಪ್ರತಿನಿಧಿಗಳಾದ ಸೂರ್ಯ-ಚಂದ್ರ-ಅಗ್ನಿಗಳನ್ನು ತೋರಿಸಿದೆವು. ಮೊದಲ ಶಬ್ದವಾಗಿ ಪ್ರಣವನಾದವನ್ನು ಅನುರಣಿಸುವ ಘಂಟಾನಾದವನ್ನು ಕೇಳಿಸಿದೆವು. ಎಲ್ಲ ಕ್ರಿಯೆಗಳಲ್ಲಿಯೂ ಮೊದಲನೆಯದಕ್ಕೆ ವಿಶೇಷ ಮಹತ್ವವಿರುತ್ತದೆ. ಅದರಂತೆಯೇ ಮೊದಲ ಅನ್ನ ಸ್ವೀಕಾರಕ್ಕೂ ಕೂಡ.

ಇದರ ಪ್ರಭಾವವು ಮಗುವಿನ ಮೇಲೆ ಗಾಢವಾಗಿ ಮುದ್ರಿತವಾಗುವುದರಿಂದ ಮಗುವು ಬೆಳೆಯುತ್ತಾ ಪುರುಷಾರ್ಥಮಯವಾದ ಜೀವನಕ್ಕೆ ಬೇಕಾದಂತಹ



ಆಹಾರವ್ಯವಸ್ಥೆಯಲ್ಲಿ ಸಹಜವಾದ ರುಚಿ ಬೆಳೆಯುತ್ತದೆ.

'ಹಿಂದಿನ ಸಂಸ್ಕಾರಗಳಂತೆಯೇ ಆಯುರ್ವೃದ್ಧಿ, ಬ್ರಹ್ಮವರ್ಚಸ್ಸು, ಗರ್ಭ-ಬೀಜಗಳಿಗೆ ಸಂಬಂಧಿಸಿದ ದೋಷನಿವಾರಣೆ, ಮಗು ಮುಂದೆ ಒಳ್ಳೆಯ ಅನ್ನವನ್ನು ಸಂಪಾದಿಸುವ ಶಕ್ತಿಗಾಗಿ ಮತ್ತು ಅಂತಿಮವಾಗಿ ಪರಮೇಶ್ವರ ಪ್ರೀತಿಗಾಗಿ ಅನ್ನಪ್ರಾಶನ ಸಂಸ್ಕಾರವಪ್ಪಾ' ಎಂದು ಶ್ರೀರಂಗ ಮಹಾಗುರುಗಳು ವಿವರಿಸಿದ್ದರು.

6- 8ನೇ ತಿಂಗಳಲ್ಲಿ ಗಂಡುಮಗುವಿಗೂ, 5-7ನೇ ತಿಂಗಳಲ್ಲಿ ಹೆಣ್ಣು ಶಿಶುವಿಗೂ ಅನ್ನಪ್ರಾಶನದ ಸಂಸ್ಕಾರವನ್ನು ಮಾಡಬೇಕು. 12ನೇ ತಿಂಗಳೊಳಗಂತೂ ನಡೆಸಲೇಬೇಕು. ಸೂಕ್ತ ತಿಥಿ- ವಾರ- ನಕ್ಷತ್ರಗಳನ್ನೂ ಋಷಿಗಳು ನಿರ್ದೇಶಿಸಿದ್ದಾರೆ.

ತಾಯಿಯ ತೊಡೆಯ ಮೇಲೆ ಅಲಂಕೃತ ಮಗುವನ್ನು ಕೂರಿಸಬೇಕು. ಅನ್ನದ ಜೊತೆ ಮಧು, ಆಜ್ಯ, ಕನಕದಿಂದ ಕೂಡಿದ ಪಾಯಸವನ್ನು, ಚಿನ್ನದ ಪಾತ್ರೆಯಲ್ಲಿಟ್ಟು, ಮಂತ್ರಪೂತವಾಗಿ ಪ್ರಾಶನ ಮಾಡಿಸಬೇಕು. ದೇವತಾಪೂಜೆಯನ್ನು ಮಾಡಿ ದೇವರಿಗೆ ನಿವೇದಿಸಿರಬೇಕು. ಹಾಲಿನಿಂದ ಮಾಡಿದ ಓದನವೇ ಪಾಯಸ.

ಮಗುವು ಗರ್ಭದಲ್ಲಿರುವಾಗ ತಾಯಿಯು ಅಶುದ್ಧವಾದ ಆಹಾರವನ್ನು ಸೇವಿಸಿದ್ದಲ್ಲಿ ಆ ದೋಷವೂ ಈ ಸಂಸ್ಕಾರದಿಂದ ಪರಿಹಾರವಾಗುವುದು. ಇಲ್ಲಿ ವಿನಿಯೋಗಿಸುವ ಮಂತ್ರಗಳ ಭಾವದೊಂದಿಗೆ ದ್ರವ್ಯಗಳು ತಮ್ಮ ರಸದಿಂದಾಗಿ (ಸಾರ) ಹೊಂದಿಕೊಳ್ಳುತ್ತವೆ. ಹಾಗೆಯೇ ಮಂತ್ರಗಳೂ ವಿಜ್ಞಾನಯುತವಾಗಿದ್ದು, ಆಯಾ ಸ್ಥಾನ, ದೇವತೆಗಳನ್ನೂ ಮುಟ್ಟಬಂದಾಗ ಪದಾರ್ಥಗಳು ಪ್ರಸಾದವಾಗುತ್ತವೆ. ಭೂಃ ಭುವಃ ಮತ್ತು ಸುವಃ ಎಂಬ ಮೂರುಲೋಕಗಳ ದೇವತೆಗಳು ಮೇಧೆಯ ವೃದ್ಧಿ, ಆಯುರ್ವೃದ್ಧಿಗಳನ್ನು ದಯಪಾಲಿಸಿ, ಪರಮಾತ್ಮನ ಸಮಾಧಿ ಸ್ಥಾನಕ್ಕೆ ಸೋಪಾನವಾಗುತ್ತದೆ. ಇಲ್ಲಿ ಮೇಧೆಯೆಂದರೆ 'ಪ್ರಣವ ತತ್ವವನ್ನು ಪಾರದರ್ಶಕವಾಗಿ ಆವರಿಸಿಕೊಂಡಿರುವ ಪ್ರಾಣತತ್ವ' ಎಂದು ಶ್ರೀರಂಗ ಮಹಾಗುರುಗಳು ತಿಳಿಸಿಕೊಟ್ಟಿದ್ದರು.

ಉಪನಿಷತ್ತುಗಳು ಹೇಳುವಂತೆ ಅನ್ನವು ಬ್ರಹ್ಮವೇ ಆಗಿದೆ. ಸೃಷ್ಟಿ-ಸ್ಥಿತಿ-ಲಯಗಳು ಯಾವುದರಿಂದ ಆಗುತ್ತದೆಯೋ ಅದೇ ಬ್ರಹ್ಮ. 'ಪರಮಾತ್ಮನಿಂದ ಆಕಾಶ, ಆಕಾಶದಿಂದ ವಾಯು, ವಾಯುವಿನಿಂದ ಅಗ್ನಿ, ಅಗ್ನಿಯಿಂದ ಜಲತತ್ವವೂ, ಜಲದಿಂದ ಪೃಥ್ವಿಯೂ, ಪೃಥ್ವಿಯಿಂದ ಔಷಧಿಗಳು, ಔಷಧಿಗಳಿಂದ ಅನ್ನವು ಹುಟ್ಟುತ್ತದೆ' ಎಂದು ಆರ್ಷ ಸಾಹಿತ್ಯಗಳು ಸೃಷ್ಟಿ ಪ್ರಕ್ರಿಯೆಯನ್ನು ವರ್ಣಿಸುತ್ತವೆ. ಲಯವಾಗುವಾಗಲೂ ತನ್ನ ಹಿಂದಿನ ತತ್ವದೊಡನೆ ವಿಲೀನಗೊಳ್ಳುತ್ತಾ ಪರಬ್ರಹ್ಮ ವಸ್ತುವಿನಲ್ಲಿ ನೆಲೆಗೊಳ್ಳುತ್ತವೆ. ಆದ್ದರಿಂದ ಅನ್ನವು ಬ್ರಹ್ಮವೇ ಆಗಿದೆ. ಈ ಪ್ರಕ್ರಿಯೆಯ ಸ್ಮರಣೆಯೇ ಯಜ್ಞದ ಫಲವನ್ನು ಕೊಡುತ್ತದೆ ಎಂಬುದು ಅನುಭವಿಗಳ ಮಾತು.

ಅನ್ನಪ್ರಾಶನವು ಅವಶ್ಯವಾಗಿ ಮಾಡಲೇಬೇಕಾದ ಸಂಸ್ಕಾರ. ಶುದ್ಧವಾದ ಅನ್ನವು ಶುದ್ಧವಾದ ಮನಸ್ಸನ್ನು ಉಂಟುಮಾಡುವುದು ಎಂದು ಯೋಗ, ಆಯುರ್ವೇದ ಇತ್ಯಾದಿ ಶಾಸ್ತ್ರಗಳು ಒತ್ತಿ ಹೇಳುತ್ತವೆ. ಅನ್ನಪ್ರಾಶನವು ಬ್ರಹ್ಮಪ್ರಾಶನ (ಯೋಗ)ದಲ್ಲಿ ಪರ್ಯವಸಾನಗೊಳ್ಳುವ ಬಹುಶ್ರೇಷ್ಠವಾದ ಸಂಸ್ಕಾರವಾಗಿದೆ.

## ಚಿಣ್ಣರ ಚಿತ್ರ





ಕುಂಬಾರಕೊಪ್ಪಲಿನಲ್ಲಿರುವ ಗ್ರೇಸ್ ವಿದ್ಯಾಸಂಸ್ಥೆಯ 4ನೇ ತರಗತಿ ವಿದ್ಯಾರ್ಥಿ ಸಿ.ಆದರ್ಶ ಬಿಡಿಸಿದ ಚಿತ್ರ

# ಚಿನ್ನ ಖರೀದಿಗೂ ಮುನ್ನ

ಒಂದನೇ ಪುಟದಿಂದ...

ಚಿನ್ನ ಖರೀದಿಸಿದರೆ ನಷ್ಟವೇನಲ್ಲ. ಅದಕ್ಕಾಗಿಯೇ ನೋಟಿಗಿಂತ ಚಿನ್ನಕ್ಕೆ ಬೇಡಿಕೆ ಜಾಸ್ತಿ. ಚಿನ್ನವನ್ನು ಹಾರ್ಡ್ ಕ್ಯಾಷ್ ಎಂದು ಕರೆಯುವುದು ಅದಕ್ಕಾಗಿಯೇ. ಚಿನ್ನಕ್ಕೆ ಬೆಲೆ ಹೆಚ್ಚುತ್ತಲೇ ಇರುವುದೂ ಜನರ ನಂಬಿಕೆಗೆ ಇನ್ನಷ್ಟು ಪುಷ್ಟಿ ಕೊಟ್ಟಿದೆ. ಚಿನ್ನ ಅಕ್ಷಯವಾಗದಿದ್ದರೂ, ಗ್ರಾಹಕರಿಗೆ ನಷ್ಟವಂತೂ ಆಗುವುದಿಲ್ಲ. ಹೀಗಾಗಿ ಕೊಳ್ಳಲು ಹಿಂದೇಟು ಹಾಕುವುದಿಲ್ಲ, 'ಅಕ್ಷಯ ತೃತೀಯಾ' ಚಿನ್ನ ಖರೀದಿಗೆ ಪ್ರಶಸ್ತ ದಿನ ಎಂಬ ಟ್ರೆಂಡ್ ಶುರುವಾಗಿದೆ.

**ಪೌರಾಣಿಕ ಮಹತ್ವ:** ಈ ದಿನಕ್ಕೆ ಇಷ್ಟೊಂದು ಮಹತ್ವ ಸೃಷ್ಟಿಯಾಗಿದ್ದಾದರೂ ಏಕೆ ಎಂಬ ಪ್ರಶ್ನೆ ಸಹಜವಾಗಿ ಉದ್ಭವಿಸುತ್ತದೆ. ಪುರಾಣಗಳಲ್ಲಿಯೂ ಈ ದಿನ ಅತ್ಯಂತ ಮಂಗಳಮಯ ಎಂದು ವರ್ಣಿಸಲಾಗಿದೆ. ಗೆಳೆಯ ಸುಧಾಮನಿಂದ ಅವಲಕ್ಕಿ ಪಡೆದು ತಿನ್ನುವ ಶ್ರೀಕೃಷ್ಣ, ಅವನಿಗೆ ಅರಿವಿಲ್ಲದಂತೆ ಅಷ್ಟೈಶ್ವರ್ಯಗಳನ್ನು ನೀಡಿದ್ದು ಇದೇ ದಿನ ಎನ್ನಲಾಗಿದೆ. ಪಾಂಡವರು ವನವಾಸದಲ್ಲಿದ್ದಾಗ ಅವರಿಗೆ ಕೃಷ್ಣ ಅಕ್ಷಯ ಪಾತ್ರೆ ನೀಡಿದ್ದು, ವಿಷ್ಣುವು ಪರಶುರಾಮನಾಗಿ ಅವತಾರ ತಾಳಿದ್ದು, ವ್ಯಾಸ ಮಹರ್ಷಿ 'ಮಹಾಭಾರತ'ವನ್ನು ಬರೆಯಲು ಆರಂಭಿಸಿದ್ದು, ಕುಬೇರ ಸಂಪತ್ತಿನ ಅಧಿಪತಿಯಾದದ್ದು ಮೊದಲಾದ ಹಲವು ಕಥೆಗಳೂ ಅಕ್ಷಯ ತೃತೀಯಾದೊಂದಿಗೆ ಥಳಕು ಹಾಕಿಕೊಂಡಿವೆ.

**ಮೈಸೂರಿನಲ್ಲಿ ಚಿನ್ನ ಮಾರಾಟ ಹೇಗೆ?:** ಸ್ವರ್ಣಪಥವೆಂದೇ ಕರೆಯಲಾಗುವ ಅಶೋಕ ರಸ್ತೆಯ ಚಿನ್ನಾಭರಣ ವ್ಯಾಪಾರಿಗಳ ಸಂಘದಡಿ 480 ಜ್ಯುವೆಲರಿ ಅಂಗಡಿಗಳಿದ್ದು, ಅದರಲ್ಲಿ ಬಹುತೇಕ ಅಂಗಡಿಯವರು ಒಂದಿಲ್ಲೊಂದು ಕೊಡುಗೆ ನೀಡುತ್ತಾ ಗ್ರಾಹಕರನ್ನು ಆಕರ್ಷಿಸುತ್ತಾರೆ.

'ಅಕ್ಷಯ ತೃತೀಯಾ ಮುಂಗಡ ಬುಕ್ಕಿಂಗ್ ಮಾಡಿದರೆ ಪ್ರತಿ ಗ್ರಾಂನ ವೆಸ್ಟೇಜ್‌ನಲ್ಲಿ ರಿಯಾಯಿತಿ ನೀಡಲಾಗುತ್ತಿದೆ' ಎಂದು ಹೇಳುತ್ತಾರೆ ಚಿನ್ನಾಭರಣ ವ್ಯಾಪಾರಿಗಳ ಸಂಘಟ ಅಧ್ಯಕ್ಷ, ಲಲಿತಾ ಜ್ಯುವೆಲರಿ ಮಾರ್ಟ್‌ನ ಮಾಲೀಕ ಸಿ.ಎಸ್.ಅಮರನಾಥ್.

ಈಚೆಗೆ ಆರಂಭವಾದ ವೈವಿಧ್ಯ ಜ್ಯುವೆಲರಿಯಲ್ಲಿ ಗ್ರಾಹಕರು ಖರೀದಿಸುವ ಪ್ರತಿ ಗ್ರಾಂ ಚಿನ್ನದ ಮೇಕಿಂಗ್ ಚಾರ್ಜ್‌ಗೆ ₹ 200 ರಿಯಾಯಿತಿ ಹಾಗೂ ಅಡ್ವಾನ್ಸ್ ಬುಕ್ ಮಾಡಿದ ಗ್ರಾಹಕರಿಗೆ ಅಶ್ಯೂರ್ಡ್ ಗಿಫ್ಟ್ ಕೂಡಾ ನೀಡಲಾಗುತ್ತಿದೆ ಎಂದು ಪರ್ವೇಜ್ ಹೇಳಿದರು.

ದೊಡ್ಡ ದೊಡ್ಡ ಮಳಿಗೆಯವರು ₹ 50 ಸಾವಿರಕ್ಕಿಂತ ಹೆಚ್ಚಿನ ಮೌಲ್ಯದ ವಜ್ರಾಭರಣ ಕೊಂಡರೆ, 1 ಗ್ರಾಂ ಚಿನ್ನದ ನಾಣ್ಯ ಉಚಿತ ಉಚಿತ. ಚಿನ್ನ ಕೊಂಡರೆ, ಅದಕ್ಕೂ ರಿಯಾಯಿತಿ ನೀಡಲಾಗುತ್ತಿದೆ.

ದೇವರಾಜ ಅರಸ್ ರಸ್ತೆಯ ಶಾರದಾ ಜುವೆಲರಿಯವರು ಪ್ರತಿ ಗ್ರಾಂ ಚಿನ್ನ ಖರೀದಿ ಮೇಲೆ ₹ 100 ಡಿಸ್ಕೌಂಟ್, ವಜ್ರಾಭರಣದ ಮೇಲೆ ₹ 4 ಸಾವಿರ ರಿಯಾಯಿತಿ ನೀಡುತ್ತಿದ್ದಾರೆ.



ಸಾಂದರ್ಭಿಕ ಚಿತ್ರ

## ನೀವೂ ಕಳುಹಿಸಿ

'ಮೆಟ್ರೊ' ಕುಂದುಕೊರತೆ, ಕ್ಯಾಂಪಸ್ ಕಲರವ, ಲೇಖನ ಕಳುಹಿಸಲು...
ಇ ಮೇಲ್: mysoremetro@prajavani.co.in
ವಾಟ್ಸ್‌ಆ್ಯಪ್; 95133 22937

II PUC SUPPL
For Excellent Coaching in
PHYSICS MATHS
CHEMISTRY BIOLOGY
Contact Immediately : SINCE 29 Years
VINAY KUMAR
16th Cross, Ramanuja Road, Agrahara, MYSURU - 4
Ph : 0821-4259778
Cell : 9845558109